

# ಕಮರುವ ಕುಡಿ ಕೊನರಲು ಬಿಡಿ

ಮಕ್ಕಳ ಅದರಲ್ಲೂ ಹದಿಹರೆಯದವರ ಮನಸ್ಸು ದುರ್ಬಲವಾಗುತ್ತಿದೆಯೇ? ಮಕ್ಕಳು ಖಿನ್ನತೆಗೊಳಗಾಗುತ್ತಿದ್ದಾರೆಯೇ? ಮಕ್ಕಳಲ್ಲಿ ಆತ್ಮಹತ್ಯೆ ಪ್ರವೃತ್ತಿ ಹೆಚ್ಚಲು ಕಾರಣಗಳೇನು... ಮುಂತಾದವುಗಳ ಬಗ್ಗೆ ವಿಶ್ಲೇಷಣಾತ್ಮಕ ಬರಹ ಇಲ್ಲಿದೆ.

■ ಸವಿತಾ ಶಾಂತಪ್ರಿಯ

ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ಸುದ್ದಿಗಳನ್ನು ಗಮನಿಸಿ. ಗವಾಹಟಿಯ ಪ್ರತಿಷ್ಠಿತ ಐಐಟಿ ಸಂಸ್ಥೆಯಲ್ಲಿ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದ ಶಿವಮೊಗ್ಗದ ಪ್ರತಿಭಾವಂತ ವಿದ್ಯಾರ್ಥಿನಿ ಆತ್ಮಹತ್ಯೆ.

ಮಂಗಳೂರಿನ ವೈದ್ಯಕೀಯ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ಅಧ್ಯಯನ ನಡೆಸುತ್ತಿರುವ ಎಂಬಿಬಿಎಸ್ ವಿದ್ಯಾರ್ಥಿನಿ ಪರೀಕ್ಷೆಗೆ ಹೋಗದೆ ಆತ್ಮಹತ್ಯೆ.

ದೆಹಲಿಯಲ್ಲಿ ಐಎಎಸ್ ಪರೀಕ್ಷೆಗೆ ತಡವಾಗಿ ಹೋಗಿ ಪರೀಕ್ಷೆ ಬರೆಯಲು ಅವಕಾಶ ದೊರೆಯದ ಕಾರಣಕ್ಕಾಗಿ ಆತ್ಮಹತ್ಯೆ.

ಓದಿ ಆಗಿಲ್ಲವೆಂದು ಆತ್ಮಹತ್ಯೆ. ನಾನು ಸೋತರೆ ನನ್ನ ಪೋಷಕರ ಮರ್ಯಾದೆ ಹೋಗುತ್ತದೆಂದು ಆತ್ಮಹತ್ಯೆ.

ಇಷ್ಟೇ ಅಲ್ಲ 8–10 ವರ್ಷ ಪ್ರಾಯದ ಮಕ್ಕಳು ಅಪ್ಪ ಅಮ್ಮ ಹೇಳಿದಲ್ಲಿಗೆ ಕರೆದೊಯ್ಯಲಿಲ್ಲವೆಂದೋ, ಕೇಳಿದ್ದು ಕೊಡಿಸಿಲ್ಲವೆಂದೋ, ಗದರಿದರೆಂದೋ ಇನ್ನಾವುದೋ ಸಣ್ಣ ಪುಟ್ಟ ಕಾರಣಕ್ಕೋ ಆತ್ಮಹತ್ಯೆ. ಈ ರೀತಿಯ ಸುದ್ದಿಗಳು ಆಗಾಗ ಕೇಳುತ್ತಿರುತ್ತೇವೆ. ಆತ್ಮಹತ್ಯೆಯೊಂದೇ ಎಲ್ಲದಕ್ಕೂ ಅಂತಿಮ ಪರಿಹಾರ ಎಂಬ ಅಭಿಪ್ರಾಯ ಮಕ್ಕಳಲ್ಲಿ ಬೆಳೆಯುತ್ತಿದೆಯೋ ಎಂದೆನ್ನಿಸುತ್ತಿದೆ.

ಹದಿಹರೆಯದವರಲ್ಲಿ ಆತ್ಮಹತ್ಯೆಗೆ ಅನೇಕ ಕಾರಣಗಳಿದ್ದರೂ ವಿದ್ಯಾಭ್ಯಾಸ ಹಾಗೂ ಪರೀಕ್ಷೆ ಒತ್ತಡದ ಹಿನ್ನೆಲೆಯಲ್ಲಿ ಚಿಂತಿಸಿದಾಗ ಮುಂದೆ ಬಾಳಿ ಬದುಕು ಕಟ್ಟಿಕೊಳ್ಳಬೇಕಾದ ಎಳೆಯ ಜೀವಗಳು ಈ ರೀತಿ ಕಮರಿ ಹೋದಾಗ ಕರುಳು ಚುರ್ರೆನ್ನುತ್ತದೆ; ಜೊತೆಗೆ ಗಾಬರಿಯೂ ಆಗುತ್ತದೆ. ಪೋಷಕರಿಗಂತೂ ತಮ್ಮ ಮಕ್ಕಳ ಸಣ್ಣ ಸಣ್ಣ ಬೇಡಿಕೆಯನ್ನು ತಿರಸ್ಕರಿಸಲೂ ಅಂಜಿಕೆಯಾಗುವ ಪರಿಸ್ಥಿತಿ. ತಮ್ಮ ಮಕ್ಕಳ ಮನಸ್ಥಿತಿ ಹೇಗಿದೆಯೋ, ಅವರಲ್ಲಿ `ಇಲ್ಲ' ಎನ್ನುವುದನ್ನು ಸ್ವೀಕರಿಸುವಷ್ಟು ಮನೋಸ್ಥೈರ್ಯ ಇದೆಯೋ ಇಲ್ಲವೋ ಎಂಬುದು ಅರಿವಿಗೆ ಬಾರದೆ ಕೇಳಿದ್ದೆಲ್ಲಾ ಕೊಡಿಸುವ, ಅವರು ಹೇಳಿದ ಹಾಗೆ ಕೇಳಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ.

ನಮ್ಮ ದೇಶದಲ್ಲಿ ಪ್ರತಿ ಗಂಟೆಗೊಬ್ಬರಂತೆ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿ ಆತ್ಮಹತ್ಯೆ ಭಾರತದಲ್ಲೇ ಅತೀ ಹೆಚ್ಚು. ಅಷ್ಟೇ ಅಲ್ಲದೆ 15ರಿಂದ 19 ವರ್ಷ ಪ್ರಾಯದ ವಿದ್ಯಾರ್ಥಿಗಳ ಆತ್ಮಹತ್ಯೆಗಳು ನಮ್ಮಲ್ಲಿ ಅತಿ ಹೆಚ್ಚು. 2016ರಲ್ಲಿ 9474 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುತ್ತದೆ ದಾಖಲೆ. ಅಲ್ಲೋ ಇಲ್ಲೋ ದಾಖಲಾದ ಘಟನೆಗಳೇ ಇಷ್ಟು. ಇಷ್ಟರಮಟ್ಟಿಗಾದರೆ ಸುದ್ದಿಯಾಗದೇ ಹೋಗುವ ಅದೆಷ್ಟೋ ಆತ್ಮಹತ್ಯಾ ಘಟನೆಗಳೆಲ್ಲ ಸೇರಿದರೆ ಈ ಸಂಖ್ಯೆ ಇನ್ನೂ ಹೆಚ್ಚಾಗುವುದು ಖಂಡಿತ. ಇನ್ನೇನು ಪರೀಕ್ಷೆಗಳು ಒಂದರ ಹಿಂದೊಂದರಂತೆ ದಾಪುಗಾಲಿಟ್ಟು ಧಾವಿಸುತ್ತಿರುವಾಗ ಪೋಷಕರು, ವಿದ್ಯಾರ್ಥಿಗಳು, ಅಧ್ಯಾಪಕರು, ಶಾಲಾ ಕಾಲೇಜುಗಳು ಈ ಕುರಿತು ಗಂಭೀರ ಚಿಂತನೆ ನಡೆಸಬೇಕಾದುದು ಅತೀ ಅಗತ್ಯ.

ಈ ರೀತಿಯ ಹತಾಶ ಭಾವನೆ ವಿದ್ಯಾರ್ಥಿವಲಯದಲ್ಲಿ ಹೆಚ್ಚಲು ಕಾರಣವೇನು? ಸೋಲಿನ ಭಯವೇ, ಸೋಲನ್ನು ಒಪ್ಪದ ಮನಸ್ಥಿತಿಯೇ, ಅತಿಯಾದ ಆಕಾಂಕ್ಷೆಯೇ